ಮುಳಬಾಗಿಲು ತಾಲ್ಲೂಕಿನ ಗಾಡನಕೆರೆ ಮತ್ತು ನಾಚಹಳ್ಳಿ ನಾಗವಾರ ಯೋಜನೆ ಬಗ್ಗೆ

೪. **ಶ್ರೀ ಆರ್. ವೆಂಕಟರಾಮಯ್ಯ** (ಮುಳಬಾಗಿಲು).— ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮುಳಬಾಗಿಲು ತಾಲ್ಲೂಕಿನಲ್ಲಿ ಗಾಡನಕೆರೆ ಯೋಜನೆ ಹಾಗೂ ವಿ. ಹೊಸಳ್ಳಿ ನಾಚಹಳ್ಳಿ ನಾಗವಾರ ಯೋಜನೆಗಳನ್ನು ತೆಗೆದುಕೊಳ್ಳಲು ಮಾನ್ಯ ಮುಖ್ಯ ಮಂತ್ರಿಗಳು ಮಾದ್ಗನ ನೀಡಿರುವುದು ನಿಜವೇ ?

ಆ) ನಿಜವಾಗಿದ್ದಲ್ಲಿ, ಈ ಯೋಜನೆಗಳನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಸೂಚನೆ ನೀಡಿದ್ದಾರೆ.

ಆ) ೧) ಗಾಡನಕೆರೆ ಯೋಜನೆ.—ಈ ಕಾಮಗಾರಿಗೆ ಕೋಲಾರ ಜಿಲ್ಲಾ ಪರಿಷತ್ತು ದಿನಾಂಕ ೨೯-೯-೧೯೮೭ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ತಾಂತ್ರಿಕ ಅನುಮೋದನೆ ನಂತರ ತೆಗೆದುಕೊಳ್ಳಲಾಗುವುದು.

೨) ವಿ. ಹೊಸಹಳ್ಳಿ ನಾಚಹಳ್ಳಿ ನಾಗಾವಾರ ಯೋಜನೆ.—ಈ ಯೋಜನೆಯ ದೀರ್ಘ ತನಿಖಾಕಾರ್ಯದ ನಂತರ, ವಿ. ಹೊಸಹಳ್ಳಿ ದೊಡ್ಡಕೆರೆಯ ಜಾಗದಲ್ಲಿ ಸುಮಾರು ೪ ರಿಂದ ೫ ವರ್ಷಗಳ ವರೆಗೆ ನೀರಿನ ಗೇಜಿಂಗ್ ಮಾಡಬೇಕೆಂದು ನಿರ್ಧರಿಸಲಾಗಿದ್ದು, ನೀರಿನ ದೊರೆಯುವಿಕೆಯು ಖಚಿತವಾದ ನಂತರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಕಾವೇರಿ ಜಲ ವಿವಾದದ ಬಗ್ಗೆ

೨. **ಶ್ರೀ ಕೆ. ಎಚ್. ಪಾಟೀಲ್** (ಗದಗ).—ಮಾನ್ಯ ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಮಿಳುನಾಡಿನ ಲೋಕಸಭೆಯಂ ಸದಸ್ಯರು ಕಾವೇರಿ ಜಲ ವಿವಾದದ ಇತ್ಯರ್ಥದ ಪ್ರಶ್ನೆಯನ್ನು ಪಂಚಾಯಿತಿಗೆ ಒಪ್ಪಿಸಲು, ಕೇಂದ್ರ ಸರ್ಕಾರವನ್ನು ವಿನಂತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಈ ವಿಷಯದ ಬಗ್ಗೆ ಸರ್ಕಾರದ ನಿಲುವೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ, ಕಾಡಾ ಮತ್ತು ನೀರಾವರಿ ಮಂತ್ರಿಗಳು)—

ಅ) ಪತ್ರಿಕೆಗಳಲ್ಲಿ ಆ ರೀತಿ ವರದಿಯಾಗಿದೆ.

ಆ) ವಿವಾದವು ಸಂಧಾನಗಳ ಮೂಲಕವೇ ಬಗೆಹರಿಯುವುದು ಶ್ರೇಷ್ಠವೆಂದು ಕರ್ನಾಟಕದ ನಿಲುವು ಮತ್ತು ಈ ನಿಲುವನ್ನೇ ಮುಂದುವರಿಸಲಾಗುತ್ತಿದೆ.

ಉಡುಪಿಯಲ್ಲಿ ಪ್ರಥಮ ದರ್ಜೆ ಕಲಾ ಮತ್ತು ವಿಜ್ಞಾನ ಕಾಲೇಜಿಗೆ ಮಂಜೂರಾತಿ ಬಗ್ಗೆ

೧೪೭. **ಶ್ರೀಮತಿ ಮನೋರಮಾ ಮಧ್ವರಾಜ್** (ಉಡುಪಿ).—ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಸೌಲಭ್ಯವನ್ನು ಕಲ್ಪಿಸಿಕೊಡುವ ಸಲುವಾಗಿ ಉಡುಪಿಯಲ್ಲಿ ಪ್ರಥಮದರ್ಜೆ ಕಲಾ ಮತ್ತು ವಿಜ್ಞಾನ ಕಾಲೇಜಿಗೆ ಮಂಜೂರಾತಿ ನೀಡುವುದನ್ನು ಸರ್ಕಾರ ಪರಿಗಣಿಸುವುದೆ ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಸಚಿವರು).—

೧೯೮೬–೮೭ರ ಸಾಲಿನಲ್ಲಿ ಸದರಿ ಸ್ಥಳದಲ್ಲಿ ಪ್ರಥಮ ದರ್ಜೆ ಕಾಲೇಜನ್ನು ಆರಂಭಿಸುವ ಬಗ್ಗೆ ವಿಶ್ವವಿದ್ಯಾಲಯ ಸಂಯೋಜನೆ ಪಡೆಯಲು ಈಗಾಗಲೇ ಕಾಲ ವಿಳಂಬವಾಗಿದೆ. ಆದಕಾರಣ ಇದನ್ನು ೧೯೮೭–೮೮ರ ಸಾಲಿಗೆ ಪರಿಶೀಲಿಸಲಾಗುವುದು.

ಮಾರುಕಟ್ಟೆ ಕಾಯಿದೆಯಡಿಯಲ್ಲಿ ಮೀನನ್ನು ವಹಿವಾಟು ಮಾಡುವ ಬಗ್ಗೆ

೧೪೪. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಮಾರುಕಟ್ಟೆ ಮತ್ತು ಒಣ ಭೂ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸುಮಾರು ಹತ್ತು ವರ್ಷಗಳ ಹಿಂದೆ ಮಂಜೂರಾಗಿರುವ ಉಡುಪಿ ಉಪ ಮಾರುಕಟ್ಟೆ ಪ್ರಾಂಗಣವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಲು ಯಾವಾಗ ಪ್ರಾರಂಭಿಸಿಲಾಗುವುದು ;

ಆ) ಮಾರುಕಟ್ಟೆ ಕಾಯಿದೆಯಡಿಯಲ್ಲಿ ಮೀನನ್ನು ಒಂದು ಕೃಷಿ ಉತ್ಪನ್ನವೆಂದು ಸೇರಿಸಿರುವುದು ನಿಜವಲ್ಲವೆ ;

ಇ) ಸಮುದ್ರ ದಡಕ್ಕೆ ಬಂದ ಮೀನನ್ನು ಮಾರಾಟ ಮಾಡಲು ಸರಿಯಾದ ಶೇಖರಣಾ ಸೌಲಭ್ಯವಿಲ್ಲದಿರುವುದರಿಂದ ಹಿಡಿದ ಮೀನನ್ನು ಮೀನಿನ ಕೈಗಾರಿಕೆಗಳಿಗೆ ಹಾಗೂ ಮಾರುಕಟ್ಟೆಗಳಿಗೆ ನೇರವಾಗಿ ಸಾಗಿಸಲಾಗುತ್ತಿದೆ ಎಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಹಾಗಿದ್ದ ಪಕ್ಷದಲ್ಲಿ, ಶೇಖರಣಾ ಸೌಲಭ್ಯವಿಲ್ಲದೆ ತೊಂದರೆಗೊಳಗಾಗಿರುವುದನ್ನು ಪರಿಗಣಿಸಿ ಮಾರುಕಟ್ಟೆ ನಿಯಂತ್ರಣ ಕಾಯಿದೆಯಿಂದ ಮೀನನ್ನು ಅಪವರ್ಜಿಸಲು ಸರ್ಕಾರ ಪರಿಶೀಲಿಸುವುದೆ ?

ಶ್ರೀ ಕೆ.ಬಿ. ವಂಡ್ಲಪ್ಪ (ಮಾರುಕಟ್ಟೆ ಮತ್ತು ಒಣ ಭೂ ಅಭಿವೃದ್ಧಿ ರಾಜ್ಯ ಮಂತ್ರಿಗಳು).—

ಅ) ಹೌದು, ಅತಿ ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.

ಆ) ಹೌದು. ಇದನ್ನು ಈಗ ಅಧಿಸೂಚನೆ ಸಂಖ್ಯೆ ಸಿಎಂಡಬ್ಲ್ಯೂ ೨೫೮ ಎಂಎಂಡಿ ೮೬, ದಿನಾಂಕ ೭–೧೧–೧೯೮೮ರಲ್ಲಿ ಅಪವರ್ಜಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) (ಅ) ಪ್ರಶ್ನೆಗೆ ಉತ್ತರಿಸಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮೀನುಗಾರಿಕೆ ಸಲಕರಣೆಗೆ ಸರಕುಗಳ ಮಾರಾಟ ತೆರಿಗೆ ದರದ ಬಗ್ಗೆ

೧೫೨. ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೀನುಗಾರಿಕೆ ಸಲಕರಣೆಗಳಿಗೆ ಮತ್ತು ಸಂಬಂಧಪಟ್ಟ ವಸ್ತುಗಳಿಗೆ ರಾಜ್ಯದಲ್ಲಿ ವಿಧಿಸಲಾಗುತ್ತಿರುವ ಮಾರಾಟ ತೆರಿಗೆ ದರವು ನೆರ ರಾಜ್ಯಗಳಿಗಿಂತ ಹೆಚ್ಚಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈ ಸರಕುಗಳಿಗೆ ಮಾರಾಟ ತೆರಿಗೆ ದರವನ್ನು ಕಡಿಮೆ ಮಾಡಲು ಸರ್ಕಾರವು ಕೈಗೊಂಡ ಕ್ರಮವೇನು ?

ಶ್ರೀ ಎಂ. ರಘುಪತಿ (ಬಂದರು ಮತ್ತು ಮೀನುಗಾರಿಕೆ ಮಂತ್ರಿಗಳು).—

ಅ) ಇಲ್ಲ.

ಆ) 'ಅ' ಪ್ರಶ್ನೆಗೆ ಮೇಲೆ ನೀಡಿದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.